ಸಹ ಸದಸ್ಯರು

ನಾಮಕರಣ ಮಾಡಿರುವುದಿಲ್ಲ

ಭೀಮಾ ಕುಡಿಯುವ ನೀರಿನ ಯೋಜನೆ

516 - ಶ್ರೀ ಕಮರೂಲ್ ಇಸ್ಲಾಮ್(ಗುಲ್ಬರ್ಗಾ) ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗಾ ನಗರದ ಎರಡನೇ ಹಂತದ ಭೀಮಾ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆಗೆ ಸಂಪುಟವು ಒಪ್ಪಿಗೆ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ವಿಳಂಬವಾಗಿರಲು ಕಾರಣವೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶಾಂತಿನಗರ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ.

1125-ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಲು ಶಾಂತಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡುವ ಪ್ರಸ್ತಾವನೆ ಇದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು)

ಅ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ೮.೦೦ಲಕ್ಷ ರೂ.ಗಳ ವೆಚ್ಚದಲ್ಲಿ ಮಿನಿ ಅಂಬ್ಕೇಡರ್ ಭವನಗಳನ್ನು ಕಟ್ಟುವ ಯೋಜನೆ ಇದೆ.

ಶಾಂತಿನಗರ ವಿಧಾನಸಭಾ ಕ್ಷೇತ್ರದಲ್ಲಿ ಸೂಕ್ತ ನಿವೇಶನ ದೊರೆತಾಗ ಮಿನಿ ಅಂಬ್ಕೇಡರ್ ಭವನದ ನಿರ್ಮಾಣವನ್ನು ಹಣದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಭಾವನೆ

98-ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಅಂಗನವಾಡಿ ಕ್ಷಾರ್ಯ ಕರ್ತೆಯರ ಮತ್ತು ಸಹಾಯಕಿಯರ ವೇತನವು ತುಂಬಾ ಕಡಿಮೆಯಾಗಿರುವುದು ನಿಜವೇ?

ಅ) *ಅವರ ಕೆಲಸಕ್ಕೆ ತಕ್ಕಂತೆ ವೇತನವನ್ನು ನಿಗಧಿಮಾಡದೆ ಇರುವುದರಿಂದ, ಅವರ ಬದುಕು ತುಂಬಾ ಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,*

ಇ) *ಅವರ ಸ್ಥಿತಿಗಳನ್ನು ಸುಧಾರಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುವುದೆ ಹಾಗಿದ್ದಲ್ಲಿ ಅಂತಹ ಕ್ರಮಗಳೇನು?*

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಾಯಕಿಯರಿಗೆ ಗೌರವಧನ ಮಾತ್ರ ನೀಡಲಾಗುತ್ತದೆ. ವೇತನವಲ್ಲ.

ಆ) ಅಂಗನವಾಡಿ ಕಾರ್ಯಕರ್ತೆಯರು: ಸಹಾಯಕಿಯರು ಗೌರವ ಸೇವೆ ಸಲ್ಲಿಸುತ್ತಿದ್ದು ಇವರ ಗೌರವ ಸೇವೆಯನ್ನು ಪರಿಗಣಿಸಿ ಗೌರವಧನ ಮಾತ್ರ ನೀಡಲಾಗುತ್ತಿದೆ. ಅದ್ದರಿಂದ ವೇತನ ಕಡಿಮೆ ಅಥವಾ ಹೆಚ್ಚು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು, ಅಂಗನವಾಡಿ ಕಾರ್ಯಕರ್ತೆಯರ: ಸಹಾಯಕಿಯರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕಲ್ಯಾಣ ನಿಧಿಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಬಿಡುಗಡೆಯಾಗಿರುವ ಹಣ.

1181-ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪರಿಶಿಷ್ಟಜಾತಿ:ಪರಿಶಿಷ್ಟ ಪಂಗಡದ ಕಾರ್ಪೋರೇಷನ್ ವತಿಯಿಂದ ಈ ಸಾಲಿನಲ್ಲಿ ಕಮಲಾಪುರ ಕ್ಷೇತ್ರಕ್ಕೆ ಬಿಡುಗಡೆಯಾದ ಹಣವೆಷ್ಟು?*

ಆ) *ಖರ್ಚು ಮಾಡಿರುವ ಯೋಜನೆಗಳಾವುವು?*

ಇ) *ಸಹಾಯಧನ, ಸಾಲ ಮಂಜೂರಾತಿ, ಜಮೀನು ಹಂಚಿಕೆ ಇತ್ಯಾದಿಗಳಿಗೆ ಮಾಡಲಾಗಿರುವ ಅಂಕಿಅಂಶಗಳ ಸಹಿತ ಪೂರ್ಣ ವಿವರ ನೀಡುವುದು? (ಯೋಜನಾವಾರು ವಿವರ ಒದಗಿಸುವುದು)?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಜಿಲ್ಲಾವಾರು ಮಾತ್ರ ಹಣವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಕ್ಷೇತ್ರವಾರು ಮಾಡುತ್ತಿಲ್ಲ.

ಆ) ಕಮಲಾಪುರ ಕ್ಷೇತ್ರದಲ್ಲಿ ಇದುವರೆವಿಗೂ ಯಾವುದೇ ಯೋಜನೆಗಳಿಗೆ ಹಣ ಖರ್ಚು ಮಾಡಿರುವುದಿಲ್ಲ. ಪ್ರಸ್ತುತ ಈ ಕ್ಷೇತ್ರದಿಂದ ಸ್ವಯಂ ಉದ್ಯೋಗ ಯೋಜನೆಯಡಿ ೨೭೮ ಅರ್ಜಿಗಳು